ವಿಜಯವಾಣಿ
ಕನ್ನಡಿಗರ ಧ್ವನಿ

# ಜೈನ್ ವಿವಿಯಲ್ಲಿ ಉದ್ಯೋಗ ಮೇಳ

ಬೆಂಗಳೂರು: ಜಯನಗರ 9ನೇ ಬಡಾವಣೆಯಲ್ಲಿನ ಜೈನ್ ವಿಶ್ವವಿದ್ಯಾಲಯ ಏ.2 ಹಾಗೂ 3ರಂದು ಬೃಹತ್ ಉದ್ಯೋಗ ಮೇಳ ಹಮ್ಮಿಕೊಂಡಿದೆ. ನೂರಕ್ಕೂ ಹೆಚ್ಚು ಪ್ರತಿಷ್ಠಿತ ಕಾರ್ಪೊರೇಟ್ ಸಂಸ್ಥೆಗಳು ಭಾಗವಹಿಸುವ ನಿರೀಕ್ಷೆ ಇದೆ. ಎರಡು ದಿನದ ಮೇಳವನ್ನು ಐಟಿ ಹಾಗೂ ಐಟಿಯೇತರ ಉದ್ಯೋಗ ಮೇಳವಾಗಿ ವಿಂಗಡಿಸಲಾಗಿದೆ. 2ರಂದು ಐಟಿಯೇತರ ಹಾಗೂ 3ರಂದು ಐಟಿ ಸಂಸ್ಥೆಗಳು ಮೇಳದಲ್ಲಿ ಪಾಲ್ಗೊಳ್ಳಲಿವೆ. ಉದ್ಯೋಗಾಕಾಂಕ್ಷಿಗಳಿಗೆ ಕೆರಿಯರ್ ಬೆಳವಣಿಗೆ ಕುರಿತು ಮಾಹಿತಿ ನೀಡಲಾಗುವುದು. ಉಚಿತ ಪ್ರವೇಶಾವಕಾಶವಿದೆ ಎಂದು ಜೈನ್ ವಿವಿ ತಿಳಿಸಿದೆ.